I/251090/2022

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/8/ಸಿಸಿಟೆಕ್/2022

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:28-04-2022

**-: ಸುತ್ತೋಲೆ :-**

ವಿಷಯ: ಸಿಸಿಟೆಕ್ ಉಪಘಟಕದ ವತಿಯಿಂದ ನಡೆಸಿರುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಂದ ಬಂದಿರುವ ಲಾಭಾಂಶದಲ್ಲಿನ ಶೇಕಡ 25% ರ ಮೊತ್ತ ಮತ್ತು ಆಡಿಟ್ ವರದಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಕೇಂದ್ರ ಘಟಕಕ್ಕೆ ಕಳುಹಿಸಿಕೊಡುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ನಡೆಸಿರುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಂದ ಬಂದಿರುವ ಲಾಭಾಂಶದಲ್ಲಿನ ಶೇಕಡ 25% ರ ಮೊತ್ತವನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಕೇಂದ್ರ ಘಟಕಕ್ಕೆ ಕಳುಹಿಸದೆ ಇರುವುದು ಕಂಡು ಬಂದಿರುತ್ತದೆ.

ಆದುದರಿಂದ ಸಂಸ್ಥೆಗಳಲ್ಲಿನ ಸಿಸಿಟೆಕ್ ಉಪಘಟಕಕ್ಕೆ ತರಬೇತಿಗಳಿಂದ ಬಂದಿರುವ ಲಾಭಾಂಶದಲ್ಲಿನ ಶೇಕಡ 25% ರ ಮೊತ್ತ ಮತ್ತು ಉಪಘಟಕಕ್ಕೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಪ್ರತಿ ಆರ್ಥಿಕ ವರ್ಷಕ್ಕೆ ಆಡಿಟ್ ಮಾಡಿಸಿ, ಆಡಿಟ್ ವರದಿಯನ್ನು ಏಪ್ರಿಲ್ ತಿಂಗಳೊಳಗಾಗಿ ತಪ್ಪದೆ ತಾಂತ್ರಿಕ ಶಿಕ್ಷಣ ಇಲಾಖೆಯ ಕೇಂದ್ರ ಘಟಕಕ್ಕೆ ಸಲ್ಲಿಸುವಂತೆ ಕ್ರಮವಹಿಸಲು ಸಂಸ್ಥೆಯ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ,

1. ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ, ಡಿಟಿಇ ವೆಬ್ ಸೈಟ್ ನಲ್ಲಿ ಪ್ರಚುರಪಡಿಸಲು